ವಿ. ಹಮೀದ್, ವಿಟ್ಲ
*ಹುಡುಗಿಗೂ, ಚಂದ್ರನಿಗೂ ಇರುವ ವ್ಯತ್ಯಾಸವೇನು?*



ಹುಡುಗಿ 15 ದಿವಸ ಸೊಕ್ಕಿ, 15 ದಿವಸ ಸೊರಗಿದರೆ ಹಾರ್ಮೋನಲ್ ಇಂಬ್ಯಾಲೆನ್ಸ್ ಎನ್ನುತ್ತಾರೆ.

ಆರತಿ ಘಟಿಕಾರ್, ದುಬೈ
*ಕೆಲವು ಕಲಾವಿದರ ಸಾಧನೆಗಿಂತ ಅವರ ಸಂಪಾದನೆಯೇ ಜೋರಾಗಿರುತ್ತದಲ್ಲ ರಾಮ್...?*
ಅವರಿಗೆ ಆರ್ಟ್‌ಗಿಂತ ಆರ್ಟ್ ಆಫ್ ಲಿವಿಂಗ್ ಚೆನ್ನಾಗಿ ಸಿದ್ಧಿಸಿದೆಯಂತೆ.

ಬಸವಣ್ಣ ಹೊನಖಾಂಡೆ, ಬಸವನಬಾಗೇವಾಡಿ
*ಹೆಂಡ + ಹೆಂಡತಿ = ?*
ಕೊಡಗಟ್ಟಲೆ ನೀರು + ನೆಗಡಿ.

ಬೂಕನಕೆರೆ ವಿಜೇಂದ್ರ, ಮೈಸೂರು
*ಸಿಗರೇಟು ಸೇದಿದರೆ ಕ್ಯಾನ್ಸರ್ ಬರುತ್ತದೆಂದು ಗೊತ್ತಿದ್ದರೂ ಸಿಗರೇಟು ಸೇದುವುದೇಕೆ?*
ಪ್ರತ್ಯಕ್ಷವಾದುದನ್ನು ಪ್ರಮಾಣಿಸಿ ನೋಡುವ ಗುಣ!

ಎಂ.ಎನ್. ಸೋಮಶೇಖರ್, ಮೈಸೂರು
*ವಕೀಲನಿಗೆ ಬಿಳಿ ಕೋಟು, ವೈದ್ಯನಿಗೆ ಕರಿ ಕೋಟು ಹಾಕಿದರೆ ಹೇಗಿರುತ್ತೆ ಸಾರ್?*




ಕಕ್ಷಿದಾರನಿಗೆ ಡ್ರೈಕ್ಲೀನ್ ಖರ್ಚಿನ ಹೊರೆ ಸೇರುತ್ತದೆ, ಮಂಪರಿನ ರೋಗಿ ಕರಿಕೋಟನ್ನು ಯಮನೆಂದು ಭ್ರಮಿಸಿ, ಹೆದರಿ, ಸಾಯುತ್ತಾನೆ.

ಹಾಡ್ಯ ಬಿ. ಜಯಾನಂದ, ಮೈಸೂರು
*ಮಂದಿರಗಳಲ್ಲಿ ಬತ್ತಿ ಇಡುವುದಕ್ಕೂ, ಕಚೇರಿಗಳಲ್ಲಿ ಬತ್ತಿ ಇಡುವುದಕ್ಕೂ ಏನು ವ್ಯತ್ಯಾಸ?*
ಇಲ್ಲಿ ಕತ್ತಲೆ ಉರುಳುತ್ತದೆ; ಅಲ್ಲಿ ತಲೆ ಉರುಳುತ್ತದೆ.

ಬಾ.ರಂ. ಸುರೇಶ್, ಶಿವಮೊಗ್ಗ
*ಹೆತ್ತ ತಾಯಿ ಹೆಚ್ಚೊ, ಕಟ್ಟಿಕೊಂಡ ಹೆಂಡತಿ ಹೆಚ್ಚೊ? ಯಾವುದನ್ನು ಹಚ್ಚಿಕೊಳ್ಳಲಿ, ಯಾವುದನ್ನು ಬಿಡಲಿ?*
ಈ ಗೊಂದಲ ಸದ್ಯಕ್ಕೆ ಇತ್ಯರ್ಥ ಆಗುವುದಿಲ್ಲವಾದ್ದರಿಂದ ಅಮೃತಾಂಜನ ಹಚ್ಚಿಕೊಳ್ಳಿ; ಕಣ್ಣುಣ್ಣು ಬಿಡಿ.

ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ
*ಆನಂದಕ್ಕೂ, ಪರಮಾನಂದಕ್ಕೂ ನೆಂಟಸ್ತನ ಇದೆಯಾ ಗುರುಗಳೆ?*
ಇದೆ. ಪರಸ್ಯ ಆನಂದಃ ಮಮ ಆನಂದಃ ಎನ್ನುವ ಮನೋಭಾವವೇ ಪರಮಾನಂದ.

ಅಮರಯ್ಯಾ ಪತ್ರಿಮಠ, ಸುರಪೂರ
*'ನಿಧಾನವೇ ಪ್ರಧಾನ' ಯಾವಾಗ?*
ಸಾಮಾನ್ಯವಾಗಿ, ಬಡ್ಡಿರಹಿತ ಸಾಲ ಹಿಂದಿರುಗಿಸುವಾಗ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಸ್ವರ್ಗಕ್ಕೂ, ನರಕಕ್ಕೂ ಇರುವ ವ್ಯತ್ಯಾಸವೇನು?*
ಸ್ವರ್ಗಕ್ಕೆ ವೈಕುಂಠ ಏಕಾದಶಿಯಂದು ಮಾತ್ರ ಬಾಗಿಲು ತೆರೆಯುತ್ತಾರೆ; ನರಕಕ್ಕೆ 24/7 ಎಂಟ್ರಿ ಫ್ರೀ...!

ಮೈಸೂರು ಕುಸುಮ, ಶ್ರವಣಬೆಳಗೊಳ
*ಸೂಪರ್ ವುಮನ್ ಎಂದರೆ ಹೇಗಿರಬೇಕು?*
ಗಂಡ, ಹತ್ತು ಮಕ್ಕಳು, ಬಂಧುಬಳಗವನ್ನು ಆತಂಕವಿಲ್ಲದೆ ನಿಭಾಯಿಸುತ್ತಿದ್ದ ನಮ್ಮ ನಿಮ್ಮ ಅಜ್ಜಿ, ಮುತ್ತಜ್ಜಿಯರಂತೆ.

ವಿ. ಹೇಮಂತಕುಮಾರ್, ಬೆಂಗಳೂರು
*ನೀ ಜೊತೆಯಿದ್ದರೆ ಪ್ರತಿ ಮುಂಜಾನೆಯೂ ನನಗೆ ಹೊಸ ವಸಂತ ಅಂತಿರ್ತಾಳಲ್ಲಾ...?*
ತಿಳಿಯಿತು; ನೀವು ಅವಳ ಮನೆಗೆ ಮಾವಿನಸೊಪ್ಪು, ಚಿಗುರೆಲೆ, ಮಲ್ಲಿಗೆ ಮೊಗ್ಗು, ಅರೆಬಿರಿದ ಗುಲಾಬಿಗಳನ್ನೀವ ಸಪ್ಲೈಯರ್!

ಕೆ.ಎಂ. ವಿಭೂತಿ, ಹರಿಹರ
*ಅವರೊಬ್ಬ ಮಹಾನ್ ಸಾಹಿತಿ. ಆದರೂ ಅವರ ಮುಖ ಹರಳೆಣ್ಣೆ ಕುಡಿದ ಹಾಗಿದೆ. ಏಕೆ?*
ಬಡಪಾಯಿಯ ಮಗನೇ ವಿಮರ್ಶಕನಂತೆ!

ರಾಜೀವ ಮಾಗಲ್, ಸಕಲೇಶಪುರ
*ಮನೆಗಳು ಒಡೆಯುವುದು ಸೀರಿಯಲ್‌ಗಳಿಂದಲೋ, ಜ್ಯೋತಿಶ ಶಾಸ್ತ್ರದಿಂದಲೋ?*
ಚಟದ ಸುತ್ತಿಗೆ, ಹಠದ ಉಳಿಗಳಿಂದ.

## ಬಹುಮಾನಿತ ಪ್ರಶ್ನೆ

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಸತ್ತರೆ ತೀರಿಹೋದ ಅನ್ನೋದೇಕೆ?*
ತಿಳಿಯದವರು ಹಾಗೆನ್ನುತ್ತಾರೆ. ತಿಳಿದವರು ಎಲ್ಲೆಲ್ಲಿ ಎಷ್ಟೆಷ್ಟು ಬಾಕಿ ಉಳಿಸಿ ತೀರಿಸದೆ ಹೋದನೆಂದು ಹೇಳುತ್ತಾರೆ.

ಬೋ.ಪಾ. ವೆಂಕಟೇಶ್, ಹೊಸಕೋಟೆ
*ಫೋನ್ ರಿಂಗಾದಾಗ ಮನೆಯಲ್ಲಿ ಇಲ್ಲ ಅಂತ ಹೇಳುವ ಬದಲು ಇನ್ನೂ ಏನು ಹೇಳಬಹುದು?*
ವಿಷಯವಿದ್ದರೆ 1 ಒತ್ತಿ; ಕಾಡುಹರಟೆಗೆ 2 ಒತ್ತಿ; ಬೀಪ್‌ನ ನಂತರ ರೆಕಾರ್ಡ್ ಮಾಡಿ. ಸಾಲಕ್ಕಾದರೆ ಡಿಸ್‌ಕನೆಕ್ಟ್ ಮಾಡಿ...

ಬಿ. ಚಂದ್ರೇಗೌಡ, ಬೆಂಗಳೂರು
*ಬಡವರ ಮನೆ ಊಟ ಚಂದ ಅಂತಾರಲ್ಲ, ಯಾಕೆ?*
ಹೊಸರುಚಿಯ ಎಕ್ಸ್‌ಪೆರಿಮೆಂಟ್‌ಗೆ ತೊಡಗದೆ ಹಳೆರುಚಿಯ ಎಕ್ಸ್‌ಪೀರಿಯನ್ಸ್‌ಗೇ ಆತುಕೊಳ್ಳುವುದರಿಂದ.

ಮಂಜುನಾಥ ಸಜ್ಜನ, ಶಿರಸಿ
ಹರಿದ ಪ್ಯಾಂಟ್ ಫ್ಯಾಶನ್; ಒಡೆದ ಹೃದಯ?



ಬಾರ್‌ಗೆ ಪ್ರೊಮೋಶನ್!

ವಿ.ಎಸ್. ಹಿಂದೂಪುರ, ಬಳ್ಳಾರಿ
*ಕುಡುಕರ ಮಕ್ಕಳು ಹೆಚ್ಚಾಗಿ ಬುದ್ಧಿವಂತರಾಗಿರುತ್ತಾರೆ. ಏಕೆ?*
ಚಿತ್ತ ಅವಲಂಬನೆಯಿಂದ ಸ್ವಾವಲಂಬನೆಯತ್ತ ಸಾಗುವುದರಿಂದ.

ಎಸ್. ಸತ್ಯನಾರಾಯಣಶ್ರೇಷ್ಠಿ, ಅಜ್ಜಂಪುರ
*ಕನ್ನಡ ಪತ್ರಿಕೆಗಳಲ್ಲಿ ಜಾಹೀರಾತುಗಳ ನಡುವೆ ಸುದ್ದಿ ಸಮಾಚಾರಗಳನ್ನು ಹುಡುಕಬೇಕಾದ ಪರಿಸ್ಥಿತಿ ಒದಗಿದೆಯಲ್ಲಾ....?*
ಅಷ್ಟು ದೊಡ್ಡ ಹಲಸಿನಕಾಯಿಯಲ್ಲಿ ಇಷ್ಟೇ ತೊಳೆ. ಆದರೂ ಬಿಡಿಸಿ ಸವಿದಷ್ಟೂ ರುಚಿ; ಪತ್ರಿಕೆಯೂ ಹಾಗೆಯೇ.

■ ರಾಮ್